# ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ : ಒಂದು ಚಿಂತನೆ

**ಜಿ. ಆರ್. ರಾಜಕುಮಾರ್**

ಕೃಷಿ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೫

☎: ೯೪೮೨೮ ೫೮೨೬ **ಮಿಂಚಂಚೆ:** rajkumargr@uasd.in

**ಇಂದು ದಿನ ನಿತ್ಯದ ಬಳಕೆಗಾಗಲಿ ಅಥವಾ ಯಾವಾಗಲಾದರೂ ಒಮ್ಮೆ ಬಳಸಬಹುದಾದ ವಸ್ತುಗಳಿಗೆ ಆಗಲಿ ಪೂರ್ವ ನಿಗದಿತ ಬೆಲೆಯನ್ನು ಕಾಣಬಹುದು. ಆದರೆ ದಿನ ನಿತ್ಯ ಪ್ರತಿ ಹೊತ್ತೂ ಉಪಯೋಗಿಸುತ್ತಿರುವ ಆಹಾರ ಧಾನ್ಯ/ಕಾಯಿಪಲ್ಯಗಳ ಬೆಲೆಗಳಿಗೆ ನಿಗದಿತ ಬೆಲೆಯಿದೆಯೇ? ಬೆಳೆಯುವ ರೈತ ಸಮುದಾಯಕ್ಕೆ ತೃಪ್ತಿಕರವಾದ ಲಾಭಾಂಶ ದೊರೆಕುತ್ತಿಲ್ಲವೆಂಬುದು ಸರ್ವವೇದ್ಯ. ಇದು ಹೀಗೇಕೆ ಮತ್ತು ಸರಿಪಡಿಸುವ ವೈಜ್ಞಾನಿಕ ಕ್ರಮಗಳಾವವು ಎಂಬುದರ ಬಗ್ಗೆ ಮಾಡಿರುವ ಗಂಭಿರ ಚಿಂತನೆ ಈ ಲೇಖನ.**

ಇದೊಂದು ಸಮಸ್ಯೆಗಳ ಆಗರ! ಕೃಷಿ ಉತ್ಪನ್ನಗಳ ಆವಕ ಹಾಗೂ ಅವುಗಳಿಗಿರುವ ಬೇಡಿಕೆ ಆಧಾರದಲ್ಲಿ ಮಾರುಕಟ್ಟೆ ದರ ನಿಂತಿರುತ್ತದೆ. ಈ ಬೆಲೆಯನ್ನು ನಿಯಂತ್ರಿಸಲು ಸರ್ಕಾರಗಳು ಹರಸಾಹಸವನ್ನೇ ಪಟ್ಟಿವೆ. ಬೆಲೆಯೇರಿಕೆಯಾದಾಗ ಗ್ರಾಹಕರು ಹಾಗೂ ಬೆಲೆ ಬಿದ್ದಾಗ ರೈತರು ಬೀದಿಗಿಳಿದು ಹೋರಾಟ ಮಾಡಿರುವುದನ್ನು ನಾವು ನೋಡಿದ್ದೇವೆ. ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ರಸ್ತೆಗೆ ಎಸೆದು ಪ್ರತಿಭಟಿಸಿದ್ದನ್ನು ಕಂಡಿದ್ದೇವೆ. ಕೃಷಿ ಉತ್ಪನ್ನಗಳು ಗ್ರಾಹಕರನ್ನು ತಲುಪುವ ಹೊತ್ತಿಗೆ ಅವುಗಳ ಬೆಲೆಯಲ್ಲಿ ದುಪ್ಪಟ್ಟು ಏರಿಕೆಯಾಗಿರುವುದನ್ನು ಗಮನಿಸಿದ್ದೇವೆ. ರೈತರಿಂದ ವರ್ತಕರಿಗೆ ಮಾರಾಟ ಆಗುವ ಮೊದಲ ಹಂತದಲ್ಲಿ ಬೆಲೆಯು ಸಾಮಾನ್ಯ ಮಟ್ಟದಲ್ಲಿಯೇ ಇರುತ್ತದೆ. ನಂತರ ಗ್ರಾಹಕರನ್ನು ಮುಟ್ಟುವ ಹಂತದಲ್ಲಿ ಬೇಡಿಕೆಯನ್ನು ಆಧರಿಸಿ ಬೆಲೆಯನ್ನು ಅತ್ಯಂತ ಲಾಭದಾಯಕವಾಗಿ ವರ್ತಕರು ನಿರ್ಧರಿಸುತ್ತಾರೆ. ರೈತರಿಗೆ ಈ ಲಾಭವು ಸೇರುವುದೇ ಇಲ್ಲ. ರೈತರು ತಮ್ಮ ಕೃಷಿ ಉತ್ಪನ್ನಗಳಿಗೆ ಈಗ ಪಡೆಯುತ್ತಿರುವ ಬೆಲೆ ಅತ್ಯಂತ ಕಡಿಮೆಯೇ ಆಗಿದೆ. ಅದರದೇ ಆದ ಅಂತಿಮ ಹಂತದ ಉತ್ಪನ್ನಗಳಿಗೆ ಹೋಲಿಸಿದಾಗ ಅವರಿಗೆ ದೊರೆಯುತ್ತಿರುವ ಬೆಲೆ ಅತ್ಯಂತ ಕಡಿಮೆ.

ಮೊದಲ ಉದಾಹರಣೆಯಾಗಿ ಭತ್ತವನ್ನು ತೆಗೆದುಕೊಳ್ಳೋಣ. ಪ್ರತಿ ಕ್ವಿಂಟಾಲ್‌ಗೆ ರೈತರು ಪಡೆಯುತ್ತಿರುವ ಬೆಲೆ ಸುಮಾರು ರೂ. ೨೦೦೦ ಆಗಿದೆ. ಒಂದು ಕ್ವಿಂಟಾಲ್ ಭತ್ತದಿಂದ ೭೫ ಕಿ.ಗ್ರಾಂ ಅಕ್ಕಿ ಅಂದರೆ ಪ್ರತಿ ಕಿ.ಗ್ರಾಂ ಭತ್ತದಿಂದ ಸುಮಾರು ಮುಕ್ಕಾಲು ಕಿ.ಗ್ರಾಂ ಅಕ್ಕಿ ಬರುತ್ತದೆ. ಈ ಮುಕ್ಕಾಲು ಕಿ.ಗ್ರಾಂ ಅಕ್ಕಿಯಿಂದ ೫ ಜನ ಊಟ ಮಾಡಬಹುದು. ಈ ಐದು ಪ್ಲೇಟ್ ಊಟಕ್ಕೆ ಹೋಟಲ್‌ನಲ್ಲಿ ರೂ. ೧೫೦–೩೦೦ ಆಗುತ್ತೆ. ಅಂದರೆ ರೈತರ ಭತ್ತಕ್ಕೆ ಸಿಕ್ಕ ಬೆಲೆ ಒಂದು ಕಿ.ಗ್ರಾಂ ಗೆ ರೂ.೨೦. ಅದೇ ಭತ್ತದಿಂದ ಬಂದ ಮುಕ್ಕಾಲು ಕಿ.ಗ್ರಾಂ ಅಕ್ಕಿಯಿಂದ ಮಾಡಿದ ಅನ್ನಕ್ಕೆ ದೊರೆಯುವ ಬೆಲೆ ರೂ. ೧೫೦–೩೦೦. ಭತ್ತದಿಂದ ಅನ್ನ ಆಗಲಿಕ್ಕೆ ಅನೇಕ ಹಂತಗಳಿವೆ ನಿಜ. ಆದರೆ ಪ್ರತಿಯೊಂದು ಹಂತದಲ್ಲೂ ಲಾಭದ ಪ್ರಮಾಣ ಇದ್ದೇ ಇರುತ್ತೆ. ಇತರ ಮೌಲ್ಯವರ್ಧಿತ ಉತ್ಪನ್ನಗಳ ಬೆಲೆ ಹೆಚ್ಚಾಗಿಯೇ ಇದೆ. ಈ ಬೆಲೆಯಲ್ಲಿ ರೈತರಿಗೆ ಸೇರಬೇಕಾದ ಲಾಭಾಂಶದ ಭಾಗ ಇದೆ. ಕೈಗಾರಿಕಾ ಉತ್ಪನ್ನಗಳಿಗೆ ಅಂತಿಮ ಹಂತದಲ್ಲಿ ನೀಡುವ ಬೆಲೆಯಂತೆ ಕೃಷಿ ಉತ್ಪನ್ನಗಳಿಗೂ ಅಂತಿಮ ಹಂತದ ಉತ್ಪನ್ನದ ಬೆಲೆ ಆಧಾರದ ಮೇಲೆ ವೈಜ್ಞಾನಿಕ ಬೆಲೆ ನೀಡಬೇಕು. **ರೈತರಿಗೆ ಬೇಕಾಗಿರುವುದು ಭತ್ತಕ್ಕೆ ಬೆಲೆಯಲ್ಲ. ಅನ್ನಕ್ಕೆ ದೊರೆಯುವ ಬೆಲೆಯಾಧಾರಿತ ಬೆಲೆ !** ಜೊತೆಗೆ ಉಪ ಉತ್ಪನ್ನಗಳ ಲಾಭವೂ ಸಿಗಬೇಕು.

ಇನ್ನೊಂದು ಉದಾಹರಣೆಗೆ ಕಬ್ಬನ್ನು ತೆಗೆದುಕೊಳ್ಳೋಣ ಕಬ್ಬು ಪ್ರತಿ ಟನ್‌ಗೆ ರೈತರು ಪಡೆಯುತ್ತಿರುವ ಬೆಲೆ ರೂ.೩೦೦೦ ಇದೆ ಅಂದುಕೊಳ್ಳೋಣ. ಒಂದು ಟನ್ ಕಬ್ಬಿನಿಂದ ಒಂದು ಕ್ವಿಂಟಾಲ್ ಸಕ್ಕರೆ ಅಂದರೆ ಹತ್ತು ಕಿ.ಗ್ರಾಂ ಕಬ್ಬಿನಿಂದ ಒಂದು ಕಿ.ಗ್ರಾಂ ಸಕ್ಕರೆ ಬರುತ್ತದೆ. ಈ ಒಂದು ಕಿ.ಗ್ರಾಂ ಸಕ್ಕರೆಯಿಂದ ಮೂರು ಕಿ.ಗ್ರಾಂ ಪೇಡಾ/ಸ್ವೀಟ್ಸ್ ಮಾಡುತ್ತಾರೆ. ಪೇಡಾ/ಸ್ವೀಟ್ಸ್ ಬೆಲೆ ರೂ. ೧೫೦–೩೦೦

ಇದೆ. ಅಂದರೆ ರೈತರ ಕಬ್ಬಿಗೆ ಸಿಕ್ಕ ಬೆಲೆ ಹತ್ತು ಕಿ.ಗ್ರಾಂ ಗೆ ರೂ. ೩೦. ಅದೇ ಹತ್ತು ಕಿ.ಗ್ರಾಂ ಕಬ್ಬಿನಿಂದ ದೊರೆಯುವ ಒಂದು ಕಿ.ಗ್ರಾಂ ಸಕ್ಕರೆಯಿಂದ ಮಾಡಿದ ೩ ಕಿ.ಗ್ರಾಂ ಪೇಡಾಗೆ/ಸ್ವೀಟ್ಸ್‌ಗೆ ದೊರೆಯುವ ಬೆಲೆ ರೂ.೪೫೦–೬೦೦. ಈ ಮೂರು ಕಿ.ಗ್ರಾಂ ಪೇಡಾ/ಸ್ವೀಟ್ಸ್‌ನಲ್ಲಿ ಒಂದು ಕಿ.ಗ್ರಾಂ ಸಕ್ಕರೆ ಇದೆಯಲ್ಲವೆ? ಈ ಒಂದು ಕಿ.ಗ್ರಾಂ ಸಕ್ಕರೆಯೂ ಕೂಡ ರೂ. ೧೫೦–೨೦೦ ಕ್ಕೆ ಸ್ವೀಟ್ಸ್ ರೂಪದಲ್ಲಿ ಮಾರಾಟ ಆಗುತ್ತದೆ ಅಲ್ಲವೆ? ಸಕ್ಕರೆಯಿಂದ ಪೇಡಾ/ಸ್ವೀಟ್ಸ್ ಆಗಲಿಕ್ಕೆ ಇರುವ ಪ್ರತಿಯೊಂದು ಹಂತದಲ್ಲೂ ಲಾಭದ ಪ್ರಮಾಣ ಇದ್ದೇ ಇರುತ್ತೆ. ಈ ಲಾಭದಲ್ಲಿ ರೈತರಿಗೆ ಸೇರಬೇಕಾದ ಲಾಭಾಂಶದ ಭಾಗ ಇದೆ. ಕೈಗಾರಿಕಾ ಉತ್ಪನ್ನಗಳಿಗೆ ಅಂತಿಮ ಹಂತದಲ್ಲಿ ನೀಡುವ ಬೆಲೆಯಂತೆ ಕೃಷಿ ಉತ್ಪನ್ನಗಳಿಗೂ ಅಂತಿಮ ಹಂತದ ಉತ್ಪನ್ನದ ಬೆಲೆ ಆಧಾರದ ಮೇಲೆ ವೈಜ್ಞಾನಿಕ ಬೆಲೆ ನೀಡಬೇಕು. ರೈತರಿಗೆ ಬೇಕಾಗಿರುವುದು ಕಬ್ಬಿಗೆ ಬೆಲೆಯಲ್ಲ. ಪೇಡಾಗೆ / ಸ್ವೀಟ್ಸ್‌ಗಳ ಬೆಲೆಯಾಧಾರಿತ ಬೆಲೆ! ಜೊತೆಗೆ ಉಪ ಉತ್ಪನ್ನಗಳ ಲಾಭವೂ ಸಿಗಬೇಕು.

ರೈತರ ಉತ್ಪನ್ನಗಳಿಗೆ **ವೈಜ್ಞಾನಿಕ ಬೆಲೆ** ಸಿಕ್ಕಾಗ ಅವರು ಮಾಡುತ್ತಿರುವ ಕೃಷಿಗೆ ಒಂದು ಅರ್ಥ ಬರುವುದು, ಅವರಿಗೆ ನ್ಯಾಯ ಸಿಕ್ಕಂತಾಗುವುದು. ಅದಕ್ಕಾಗಿಯೇ ಈ ಪ್ರಯತ್ನ ! ಈ ಲಾಭಾಂಶವನ್ನು ಪಡೆಯಲು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಿದ ದಿನದಿಂದ ಹಲವು ವರ್ಷಗಳನ್ನೇ ಕಾಯಬೇಕಾಗಬಹುದು. ಆದ್ದರಿಂದ ಕೃಷಿ ಉತ್ಪನ್ನಗಳಿಗೆ ದೊರೆಯಬೇಕಾದ ಸರಿಯಾದ ಬೆಲೆಯನ್ನು ಈ ಕೆಳಗಿನ ರೀತಿ ನೀಡಬಹುದಾಗಿದೆ.

**ಬೆಂಬಲ ಬೆಲೆ** – ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಇಳಿದಾಗ, ಸಂಕಷ್ಟ ಕಾಲದಲ್ಲಿ ಸರಕಾರದಿಂದ ಮಾಡಲಾಗುವ ಖರೀದಿ ಬೆಲೆ ಇದಾಗಿದೆ. ಬೆಳೆ ಬೆಳೆಯಲು ತಗಲುವ ವೆಚ್ಚಕ್ಕೆ ಇದು ಸಮನಾಗಿರಬೇಕು. ಖರ್ಚಿನ ವಿವರ.

- ಭೂಮಿ ಸಿದ್ದತೆ ಖರ್ಚು
- ಬೀಜ, ಗೊಬ್ಬರ ಹಾಗೂ ಔಷಧಿಗಳಿಗೆ ತಗಲುವ ಖರ್ಚು
- ಕೆಲಸಕ್ಕೆ ಬಳಸಿದ ಕಾರ್ಮಿಕರು (ರೈತನು/ರೈತ ಮಹಿಳೆಯು ಹಾಗು ಆತನ/ಆಕೆಯ ಕುಟುಂಬದವರು ಮಾಡುವ ಕೆಲಸವೂ ಸೇರಿ)
- ಕೆಲಸಕ್ಕೆ ಬಳಸಿದ ಪರಿಕರಗಳ ಬಾಡಿಗೆ (ಸ್ವಂತವೂ ಸೇರಿ)
- ಕಟಾವು ವೆಚ್ಚ (ಉತ್ಪನ್ನವನ್ನು ಮಾರಾಟಕ್ಕೆ ಸಿದ್ಧಗೊಳಿಸುವುದೂ ಸೇರಿ)
- ಸಾಗಣೆ ಹಾಗೂ ಮಾರಾಟ ವೆಚ್ಚ

ಈ ಬೆಂಬಲ ಬೆಲೆಯಲ್ಲಿ ಲಾಭಾಂಶವನ್ನು ನೀಡಬೇಕಾಗಿಲ್ಲ. ಬೆಳೆ ಬೆಳೆಯಲು ತಗಲುವ ವೆಚ್ಚ ನೀಡಿದರೆ ಸಾಕು. ಎಲ್ಲ ರೈತರೂ ಒಂದೇ ರೀತಿಯಲ್ಲಿ ಖರ್ಚನ್ನು ಮಾಡುವುದಿಲ್ಲ. ಆದರೂ ಕೂಡ ಬೆಂಬಲ ಬೆಲೆಯು ಎಲ್ಲರಿಗೂ ಒಂದೇ ಮಟ್ಟದಲ್ಲಿರಬೇಕು.

**ವೈಜ್ಞಾನಿಕ ಬೆಲೆ** – ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಿದಾಗ ಮಾರಾಟ ಮಾಡಿದ ಒಟ್ಟು ಬಾಬತ್ತಿನ ಮೇಲೆ ಶೇ. ೧೦ ರಿಂದ ೨೫ ರವರೆಗೆ ಲಾಭಾಂಶವನ್ನು ತತ್‌ಕ್ಷಣವೇ ರೈತರ ಬ್ಯಾಂಕ್ ಅಕೌಂಟ್‌ಗೆ ಸರ್ಕಾರವು ನೀಡಬೇಕು. ಮೂಲ ಉತ್ಪನ್ನವು ಅಂತಿಮವಾಗಿ ಗ್ರಾಹಕರನ್ನು ತಲುಪವವರೆಗೆ ಗಳಿಸಬಹುದಾದ ವಿವಿಧ ಹಂತದ ಉತ್ಪನ್ನದ ಬೆಲೆಯ ಭಾಗಾಂಶವು ಇದಾಗಿದೆ. ಇದನ್ನು ಸರ್ಕಾರವು ಮಾರಾಟ ತೆರಿಗೆ ಮೂಲಕ ಪಡೆಯುತ್ತಿದೆ. ಸಂಗ್ರಹ ಮಾಡುತ್ತಿಲ್ಲವಾದರೆ ಈಗ ಆರಂಭಿಸುವುದು ಅತ್ಯಂತ ಸೂಕ್ತ. ಈ ರೀತಿ ಸಂಗ್ರಹವಾಗುವ ತೆರಿಗೆಯಲ್ಲಿ ಸ್ವಲ್ಪ ಭಾಗವನ್ನು ಮೀಸಲಿಟ್ಟರೂ ರೈತರಿಗೆ ಈ ಲಾಭಾಂಶವನ್ನು ನೀಡಬಹುದು.

ಅಂದರೆ ರೂ. ೧೦೦೦ ದಿಂದ ರೂ. ೨೦೦೦ ಕೋಟಿಯಷ್ಟು ಹಣವನ್ನು ರೈತರಿಗೆ ವಾರ್ಷಿಕವಾಗಿ ಮೀಸಲಿಟ್ಟರೆ ಸಾಕು ವೈಜ್ಞಾನಿಕ ಬೆಲೆಯನ್ನು ಪೆನ್‌ಶನ್ ರೂಪದಲ್ಲಿ ನೀಡಬಹುದು. ರೈತರಿಗೆ ೬೫ ವರ್ಷವನ್ನು ಪೆನ್‌ಶನ್‌ಗೆ ನಿಗದಿಗೊಳಿಸಬೇಕು.

**ತುಟ್ಟಿ ಭತ್ಯೆ :** ರೈತರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಿದಾಗ ಇದ್ದ ಬೆಲೆಗಿಂತ ಗ್ರಾಹಕರನ್ನು ತಲುಪುವ ಹಂತದವರೆಗೆ ಆಗುವ ಬೆಲೆಯೇರಿಕೆಯ ಭತ್ಯ ಇದಾಗಿದೆ. ಇದನ್ನು ಆರು ತಿಂಗಳಿಗೊಮ್ಮೆ ರೈತರ ಬ್ಯಾಂಕ್ ಅಕೌಂಟ್‌ಗೆ ನೀಡಬೇಕು.

**ಕರ್ನಾಟಕದ ವಿವಿಧ ರೈತ ವರ್ಗದವರಿಗೆ ನೀಡಬಹುದಾದ ಲಾಭಾಂಶ**

| ಕರ್ನಾಟಕದಲ್ಲಿ ರೈತರ ವರ್ಗ | ಸಂಖ್ಯೆ (ಲಕ್ಷಗಳಲ್ಲಿ) | ಒಟ್ಟು ಕ್ಷೇತ್ರ ಹೆಕ್ಟೇರ್ (ಲಕ್ಷಗಳಲ್ಲಿ) | ಪಡೆಯಬಹುದಾದ ಆದಾಯ (ರೂ. ಕೋಟಿ) | ಸಂಗ್ರಹಿಸಬಹುದಾದ ತೆರಿಗೆ (ಮಾರಾಟ ಬೆಲೆಯ ಶೇ. ೫ ರಂತೆ) (ರೂ. ಕೋಟಿ) | ರೈತರಿಗೆ ನೀಡಬಹುದಾದ ಲಾಭಾಂಶ (ಮೂಲ ಬೆಲೆಯ) | |
|---|---|---|---|---|---|---|
| | | | | | ಶೇ. ೧೦ ರಂತೆ (ರೂ. ಕೋಟಿ) | ಶೇ. ೨೫ ರಂತೆ (ರೂ. ಕೋಟಿ) |
| ಅತಿ ಸಣ್ಣ ರೈತರು (೧.೦ ಹೆಕ್ಟೇರ್ ಗಿಂತ ಕಡಿಮೆ) | ೩೮.೫ | ೧೮.೫ | ೯೨೫೦ (ಪ್ರತಿ ಹೆಕ್ಟೇರ್ ಗೆ ರೂ.೫೦,೦೦೦) | ೩೦೦ | ೧೦೦ | ೨೫೦ |
| ಸಣ್ಣ ರೈತರು (೧–೨ ಹೆಕ್ಟೇರ್) | ೨೧.೪ | ೩೦.೨ | ೧೫೧೦೦ (ಪ್ರತಿ ಹೆಕ್ಟೇರ್ ಗೆ ರೂ.೫೦,೦೦೦) | ೫೦೦ | ೨೦೦ | ೫೦೦ |
| ಸಣ್ಣ ಮಧ್ಯಮ ರೈತರು (೨–೪ ಹೆಕ್ಟೇರ್) | ೧೨..೭ | ೩೩.೯ | ೨೫೪೨೫ (ಪ್ರತಿ ಹೆಕ್ಟೇರ್ ಗೆ ರೂ.೭೫,೦೦೦) | ೭೦೦ | ೩೦೦ | ೬೫೦ |
| ಮಧ್ಯಮ ರೈತರು (೪–೧೦ ಹೆಕ್ಟೇರ್) | ೫.೧ | ೨೯.೦ | ೨೯೦೦೦ (ಪ್ರತಿ ಹೆಕ್ಟೇರ್ ಗೆ ರೂ.೧,೦೦,೦೦೦) | ೯೦೦ | ೪೦೦ | ೭೫೦ |
| ದೊಡ್ಡ ರೈತರು (೧೦ ಹೆಕ್ಟೇರ್‌ಗಿಂತ ಹೆಚ್ಚು) | ೦.೭ | ೯.೯ | ೯೯೦೦ (ಪ್ರತಿ ಹೆಕ್ಟೇರ್ ಗೆ ರೂ.೧,೦೦,೦೦೦) | ೨೦ | ೧೦ | ೨೫ |
| ಒಟ್ಟು | ೭೮.೪ | ೧೨೧.೫ | ೮೮೬೭೫ | ೨೪೨೦ | ೧೦೧೦ | ೨೧೭೫ |

## ಹೊಸ ಟ್ಯಾಕ್ಸ್ ಪದ್ಧತಿ

ಈ ಬೆಲೆಯನ್ನು ನೀಡಲು ಹೊಸದಾದ ಕೃಷಿ ಉತ್ಪನ್ನಗಳ ಟ್ರೇಡ್ ಲೈಸನ್ಸ್ (ಕೃಷಿ ಉತ್ಪನ್ನಗಳ ನೇರ / ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟಗಾರರ ಲೈಸನ್ಸ್) ಜಾರಿಗೆ ತರಬೇಕು. ಹಾಗೂ ಡೇ ಟ್ರೇಡ್ ಟ್ಯಾಕ್ಸ್ ಪದ್ಧತಿ ಜಾರಿಗೆ ತರುವುದರ ಮೂಲಕ (ಏಕೆಂದರೆ ದಿನನಿತ್ಯವೂ ಹಣದ ವ್ಯವಹಾರವಾಗುತ್ತದೆಯಾದ್ದರಿಂದ ದಿನದ ತೆರಿಗೆ ಮೂಲಕ) ಆದಾಯವನ್ನು ಕ್ರೋಡೀಕರಿಸಬಹುದು. ಈ ಆದಾಯದಲ್ಲಿ ರೈತರ ಲಾಭಾಂಶವನ್ನು ನೀಡಬಹುದು. ಇದು ರೈತರಿಗೆ ನಿವೃತ್ತಿ ಹಂತದಲ್ಲಿ ಸಿಗುವಂತಾಗಬೇಕು. ಈಗಾಗಲೇ ಟ್ಯಾಕ್ಸ್ (ವ್ಯಾಟ್/ ಸೇಲ್ಸ್ ಟ್ಯಾಕ್ಸ್) ಪಾವತಿಸುತ್ತಿರುವವರು ವರ್ಷಕ್ಕೊಮ್ಮೆ ಹೊಸದಾಗಿ / ನವೀಕರಿಸಿ ಟ್ರೇಡ್ ಲೈಸನ್ಸ್ ಪಡೆದು ಪ್ರತಿ ತಿಂಗಳು ಟ್ರೇಡ್ ಟ್ಯಾಕ್ಸ್ ಪಾವತಿಸಬೇಕು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಇನ್ನೂ ಲೈಸನ್ಸ್ ಪಡೆಯದೇ ಇರುವವರು ಹಾಗೂ ಟ್ಯಾಕ್ಸ್ ಪಾವತಿ ಮಾಡದೇ ಇರುವವರು ಅನೇಕರಿದ್ದಾರೆ ! ಹೋಟೆಲ್ ಉದ್ಯಮದವರು, ಬೇಕರಿ ಉದ್ಯಮದವರು, ತರಕಾರಿ ಮಾರಾಟಗಾರರು, ದಿನಸಿ ಅಂಗಡಿ ವ್ಯಾಪಾರಸ್ತರು, ಹಣ್ಣುಗಳ ಮಾರಾಟಗಾರರು ಇತರೆ ಕೃಷಿ ಉತ್ಪನ್ನ ಮಾರಾಟಗಾರರು.

ಸಂಬಂಧಪಟ್ಟವರು ತೆರಿಗೆಯನ್ನು ಈಗಾಗಲೇ ಪಾವತಿ ಮಾಡುತ್ತಿದ್ದಲ್ಲಿ ಇದು ಅವರನ್ನು ಉದ್ದೇಶಿಸಿ ಉಲ್ಲೇಖಿಸಿರುವುದಿಲ್ಲ! ಇಲ್ಲಿ ಕೆಲವನ್ನು ಮಾತ್ರ ನೀಡಲಾಗಿದೆ. ಕೃಷಿ ಉತ್ಪನ್ನಗಳ ವಹಿವಾಟು ನಡೆಸುವವರು / ಮಿಶ್ರ ವ್ಯಾಪಾರ ಮಾಡುವವರು ಯಾರೇ ಆಗಿದ್ದರು ಅವರನ್ನು ಈ ವ್ಯಾಪ್ತಿಯೊಳಗೆ ಸೇರಿಸಬೇಕು. ಇವರೆಲ್ಲರಿಗೂ ಈ ಕೆಳಗೆ ತಿಳಿಸಿದಂತೆ ಶುಲ್ಕಗಳನ್ನು ವಿಧಿಸಬೇಕು.

- **ಟ್ರೇಡ್ ಲೈಸನ್ಸ್ ಫೀ**
  - ಅ. ಅರ್ಜಿ ಮತ್ತು ಪ್ರೊಸೆಸ್ಸಿಂಗ್ ಫೀ – ರೂ. ೫೦ (ಮೊದಲ ಬಾರಿ)
  - ಆ. ಲೈಸನ್ಸ್ ಫೀ – ಗರಿಷ್ಠ ಮಿತಿಯ ಶೇ. ೧೦ ರಷ್ಟು (ಮೊದಲ ಬಾರಿ)
  - ಇ. ಲೈಸನ್ಸ್ ನವೀಕರಣ ಶುಲ್ಕ – ಗರಿಷ್ಠ ಮಿತಿಯ ಶೇ. ೫ ರಷ್ಟು (ಪ್ರತಿ ವರ್ಷ)

ದಿನಕ್ಕೆ ರೂಪಾಯಿ ವಹಿವಾಟಿನ ಗರಿಷ್ಠ ಮಿತಿ ವರ್ಗ: ೫೦೦ ಕ್ಕಿಂತ ಕಡಿಮೆ, ೩,೦೦೦ ದವರೆಗೆ, ೧೦೦೦೦ ದವರೆಗೆ, ೨೫೦೦೦ ದವರೆಗೆ, ೧೦೦೦೦೦ ದವರೆಗೆ ಹಾಗೂ ಲಕ್ಷಕ್ಕೂ ಹೆಚ್ಚು ಈ ರೀತಿ ವರ್ಗೀಕರಿಸಬಹುದು.

➤ **ಟ್ರೇಡ್ ಟ್ಯಾಕ್ಸ್ :** ಯಾವುದೇ ತಿಂಗಳು ಮಾಡಿದ ವಹಿವಾಟಿನ ಮೊತ್ತದ ಶೇ.೫ ರಷ್ಟು ತೆರಿಗೆಯನ್ನು ಅದರ ಮುಂದಿನ ತಿಂಗಳ ಮೊದಲ ವಾರದಲ್ಲಿ ತುಂಬುವಂತಾಗಬೇಕು. ವಹಿವಾಟು ನಡೆಸಲು ಪಡೆದ ಲೈಸನ್ಸ್ ಮಿತಿಯಲ್ಲಿಯೇ ಗಳಿಸಿದ ಆದಾಯ ಇರಬೇಕು. ಹೆಚ್ಚಿನ ಆದಾಯ ಗಳಿಸಿದ್ದಲ್ಲಿ ಹೆಚ್ಚಿನ ವಹಿವಾಟಿನ ಮೊತ್ತದ ಶೇ.೧೦ ರಷ್ಟು ತೆರಿಗೆಯನ್ನು ತುಂಬಬೇಕು. ರಾಜ್ಯದ ಎಲ್ಲ ನಗರಗಳಲ್ಲಿ ವಸೂಲಿಗಾಗಿ ಪ್ರತ್ಯೇಕ ಮಾರುಕಟ್ಟೆ ತೆರಿಗೆ ಅಧಿಕಾರಿಗಳ ತಂಡ ಇರಬೇಕು. ಪ್ರತಿ ಹೋಬಳಿ ಮಟ್ಟಕ್ಕೊಬ್ಬರು ತೆರಿಗೆ ಅಧಿಕಾರಿ ಇರಬೇಕು. ಗ್ರಾನ-ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ಪ್ರತಿ ನಿತ್ಯ ಪರಿಶೀಲನೆ ಮಾಡಬೇಕಾಗುವುದು. ಇದಕ್ಕಾಗಿ ಮಳಿಗೆಗೆ / ಘಟಕಕ್ಕೆ ಪ್ರತಿ ನಿತ್ಯ ಭೇಟಿ ನೀಡಬೇಕಾಗುವುದು. ಪ್ರತಿ ೫೦೦ ಘಟಕಗಳಿಗೆ ಒಬ್ಬರು ತೆರಿಗೆ ಅಧಿಕಾರಿ ನೇಮಕವಾಗಬೇಕು. **ಈ ಅಧಿಕಾರಿಗಳ ಕಾಯಕದಿಂದ ನಮ್ಮ ಹೊಟ್ಟೆಯ ಹಸಿವನ್ನು ಇಂಗಿಸುವ ರೈತರ ನೋವನ್ನು ತಣಿಸಬಹುದಾಗಿದೆ.**

ರೈತರ ಹೋರಾಟವೂ ಈ ದಿಸೆಯಲ್ಲಿರಬೇಕು ಎಂಬುದು ಈ ಲೇಖನದ ಉದ್ದೇಶ. ವೈಜ್ಞಾನಿಕ ಬೆಲೆ ನೀಡಬೇಕೆಂಬುದು ಬಹಳ ಹಳೆಯ ಬೇಡಿಕೆ. ಅಂತಿಮ ಹಂತದ ಉತ್ಪನ್ನದ ಬೆಲೆಯ ಆಧಾರದ ಮೇಲೆ ಲಾಭಾಂಶವನ್ನು ಸರ್ಕಾರ ರೈತರಿಗೆ ನೀಡಿದರೆ ಸರಿಯಾಗುವುದು. ಬೆಲೆ ಇಳಿದಾಗ ಬೆಂಬಲ ಬೆಲೆಯನ್ನು ತತ್‌ಕ್ಷಣವೇ ನೀಡುವುದರ ಜೊತೆಗೆ ಮೂಲ ಬೆಲೆಯ ಶೇ. ೧೦-೨೫ ರಷ್ಟು ಲಾಭಾಂಶವನ್ನು ತತ್‌ಕ್ಷಣ ಪೆನ್‌ಶನ್ ಅಕೌಂಟ್‌ಗೆ ಹಾಕಿದರೆ ಈ ಸಮಸ್ಯೆ ಬೇಗನೆ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ. ಇದರೊಂದಿಗೆ ಬೆಲೆಯೇರಿಕೆಯಾದಾಗ ಅದರ ಲಾಭವನ್ನು ರೈತರಿಗೆ ಮುಟ್ಟಿಸಲು ತುಟ್ಟಿಭತ್ಯೆಯನ್ನು ಕಾಲಕಾಲಕ್ಕೆ ನಿರ್ಧರಿಸಿ ಪೆನ್‌ಶನ್ ಅಕೌಂಟ್‌ಗೆ ಹಾಕಬೇಕು.




**ಕೊನೆ ಹನಿ**

ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿಯೇ ರೈತರು ವಹಿವಾಟನ್ನು ನಡೆಸುವುದರಿಂದ ಅನೇಕ ಪ್ರಯೋಜನಗಳು ಸರ್ವರಿಗೂ ಆಗುತ್ತವೆ. ಯಾವ ಬೆಳೆಗೆ ಶೇ. ೧೦ ರಷ್ಟರ ಲಾಭಾಂಶವನ್ನು ನೀಡಬೇಕು ಯಾವ ಬೆಳೆಗೆ ಶೇ. ೨೫ ರಷ್ಟರ ಲಾಭಾಂಶವನ್ನು ನೀಡಬೇಕು ಎಂಬುದನ್ನು ವಿವಿಧ ಜಿಲ್ಲೆಗಳಲ್ಲಿ ಆಗುವ ಕೃಷಿ ಉತ್ಪನ್ನಗಳನ್ನು ಕೇಂದ್ರೀಕರಿಸಿ ವಿವಿಧ ಹಂತಗಳ ಪರೀಶೀಲನೆಯ ಯೋಜನೆಯನ್ನು ಹಾಕುವುದರ ಮೂಲಕ ಕಂಡುಕೊಳ್ಳಬಹುದಾಗಿದೆ.

*****

**ಲೇಖನಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿದ್ದಲ್ಲಿ..............**

**ಕೃಷಿ ಮುನ್ನಡೆ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳನ್ನು ಸಾಧ್ಯವಾದಷ್ಟು ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಿರುತ್ತಾದರೂ ಕೆಲವೊಮ್ಮೆ ಓದುಗರಿಗೆ ಹೆಚ್ಚಿನ ಮಾಹಿತಿಗಾಗಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲವು ಪ್ರಶ್ನೆಗಳು ಉದ್ಭವಿಸಬಹುದು. ಆಯಾ ಲೇಖನಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಆದ್ದರಿಂದ ಓದುಗರಲ್ಲಿ ಒಂದು ವಿನಂತಿ. ತಾಂತ್ರಿಕ ಮಾಹಿತಿ ಅಥವಾ ಲೇಖನಗಳನ್ನು ಕುರಿತು ಪ್ರಶ್ನೆಗಳಿದ್ದರೆ ಆಯಾ ಲೇಖಕರನ್ನೇ ನೇರವಾಗಿ ಸಂಪರ್ಕಿಸಬೇಕು. ಈ ಕಾರಣಕ್ಕಾಗಿಯೇ ಪ್ರತಿಯೊಂದು ಲೇಖಕರ ದೂರವಾಣಿ ಸಂಖ್ಯೆ, ಮಿಂಚಂಚೆ ಹಾಗೂ ಅಂಚೆ ವಿಳಾಸಗಳನ್ನು ಪ್ರಕಟಿಸಿರುತ್ತದೆ.**

**ಧನ್ಯವಾದಗಳು,** **– ಸಂ.**